# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ | 524 |
| ಸದಸ್ಯರ ಹೆಸರು | ಶ್ರೀ ಶಶೀಲ್ ಜಿ. ನಮೋಶಿ<br>(ಶಿಕ್ಷಕರ ಕ್ಷೇತ್ರ) |
| ಉತ್ತರಿಸುವ ದಿನಾಂಕ | 19-07-2024 |
| ಉತ್ತರಿಸುವ ಸಚಿವರು | ಕೃಷಿ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕಳೆದ ಒಂದು ವರ್ಷದಲ್ಲಿ ರಾಜ್ಯದಲ್ಲಿ ಉತ್ಪಾದನೆಯಾದ ತೊಗರಿ ಪ್ರಮಾಣವೆಷ್ಟು; | 2023-24ನೇ ಸಾಲಿನ ಮೂರನೇ ಮುಂಗಡ ಅಂದಾಜು ವರದಿಯನ್ವಯ ರಾಜ್ಯದಲ್ಲಿ 10.20 ಲಕ್ಷ ಟನ್ ಗಳಷ್ಟು ತೊಗರಿ ಉತ್ಪಾದನೆಯಾಗಿರುತ್ತದೆ. |
| ಆ) | ಕಳೆದ ಒಂದು ವರ್ಷದಲ್ಲಿ ಕಲಬುರಗಿ ಜಿಲ್ಲೆಯೊಂದರಲ್ಲೇ ಬೆಳೆದ ತೊಗರಿ ಪ್ರಮಾಣ ಎಷ್ಟು ಹಾಗೂ ದರ ಹಾಗೂ ನಿಗದಿಪಡಿಸಿರುವ ಕನಿಷ್ಠ ಬೆಂಬಲ ಬೆಲೆ ಎಷ್ಟು; | 2022-23ನೇ ಸಾಲಿನ ಅಂತಿಮ ಅಂದಾಜು ವರದಿಯನ್ವಯ ಕಲಬುರಗಿ ಜಿಲ್ಲೆಯೊಂದರಲ್ಲೇ 4.31 ಲಕ್ಷ ಟನ್‌ಗಳಷ್ಟು ತೊಗರಿ ಉತ್ಪಾದನೆಯಾಗಿರುತ್ತದೆ.<br><br>2023-24ನೇ ಸಾಲಿನ ಜಿಲ್ಲಾವಾರು ಉತ್ಪಾದನೆ ಅಂತಿಮ ಅಂದಾಜು ವರದಿ ಇನ್ನೂ ಬಿಡುಗಡೆಯಾಗಿರುವುದಿಲ್ಲ.<br><br>ಕೃಷಿ ಉತ್ಪನ್ನಗಳಿಗೆ ಬೆಂಬಲ ಬೆಲೆಯನ್ನು ಕೇಂದ್ರ ಸರ್ಕಾರವು ನಿಗದಿಪಡಿಸುತ್ತದೆ.<br><br>ಕಳೆದ ಸಾಲಿನಲ್ಲಿ (2023-24ನೇ ಸಾಲಿನಲ್ಲಿ) ಪ್ರತಿ ಕ್ವಿಂಟಾಲ್ ಎಫ್. ಎ. ಕ್ಯೂ. ಗುಣಮಟ್ಟದ ತೊಗರಿಗೆ ರೂ.7000/- ಬೆಂಬಲ ಬೆಲೆ ನಿಗದಿಪಡಿಸಲಾಗಿತ್ತು. ಪ್ರಸಕ್ತ ಸಾಲಿನಲ್ಲಿ (2024-25ನೇ ಸಾಲಿನಲ್ಲಿ) ಕೇಂದ್ರ ಸರ್ಕಾರವು ಬೆಂಬಲ ಬೆಲೆಯನ್ನು ಹೆಚ್ಚಿಸಿದ್ದು, ಪ್ರತಿ ಕ್ವಿಂಟಾಲ್ ಗೆ ರೂ. 7550/- ನಿಗದಿಪಡಿಸಲಾಗಿದೆ. |
| ಇ) | ರಾಜ್ಯದಲ್ಲಿ ತೊಗರಿ ಬೆಳೆಯ ಉತ್ಪಾದನೆಯನ್ನು ಹೆಚ್ಚಿಸಲು ಮತ್ತು ತೊಗರಿ ಬೇಳೆ ಆಮದನ್ನು ಕಡಿಮೆಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; | ರಾಜ್ಯದಲ್ಲಿ ತೊಗರಿ ಬೆಳೆಯ ಉತ್ಪಾದನೆಯನ್ನು ಹೆಚ್ಚಿಸಲು ಮತ್ತು ಆಮದನ್ನು ಕಡಿಮೆಗೊಳಿಸಲು ಪ್ರಸಕ್ತ ಸಾಲಿನಲ್ಲಿ ಕೇಂದ್ರ ಸರ್ಕಾರದಿಂದ ಹೆಚ್ಚಿನ ಒತ್ತು ನೀಡಲಾಗುತ್ತಿದ್ದು, ಈ ಸಂಬಂಧ ಹಲವು ಸಭೆಗಳನ್ನು ಏರ್ಪಡಿಸಿ ರಾಜ್ಯದಲ್ಲಿ ಬಿತ್ತನೆ ಬೀಜಗಳ ಲಭ್ಯತೆ, ತಾಂತ್ರಿಕತೆಗಳ ಅಳವಡಿಕೆ ಹಾಗೂ ಹೆಚ್ಚಿನ ಉತ್ಪಾದನೆಗೆ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ |

| | | |
|---|---|---|
| | | ವಿವರವಾಗಿ ಚರ್ಚೆ ಕೈಗೊಂಡು ಆಹಾರ ಮತ್ತು ಪೌಷ್ಟಿಕ ಭದ್ರತೆ ಯೋಜನೆಯ - ದ್ವಿದಳಧಾನ್ಯ ಕಾರ್ಯಕ್ರಮದಡಿ ಪ್ರಮುಖವಾಗಿ ತೊಗರಿ ಬೆಳೆಯಲ್ಲಿ ಕ್ಷೇತ್ರ ವಿಸ್ತರಣೆ, ಉತ್ಪಾದನೆ ಹಾಗೂ ಉತ್ಪಾದಕತೆ ಹೆಚ್ಚಿಸುವ ನಿಟ್ಟಿನಲ್ಲಿ ನೂತನ ತಳಿಗಳ ಬಳಕೆಯಿಂದ ತಾಂತ್ರಿಕತೆಗಳನ್ನು ಅಳವಡಿಸಿ ಪ್ರಾತ್ಯಕ್ಷಿಕೆಗಳನ್ನು ಅನುಷ್ಠಾನ ಮಾಡುವುದು, ಧೃಡೀಕೃತ ಬಿತ್ತನೆ ಬೀಜಗಳ ವಿತರಣೆ, ಸಮಗ್ರ ಪೋಷಕಾಂಶ ಮತ್ತು ಪೀಡೆ ನಿರ್ವಹಣೆ, ಯಂತ್ರೋಪಕರಣಗಳ ಬಳಕೆ, ಸ್ಥಳೀಯ ಪ್ರೇರಕಗಳಾದ ಹಸಿರೆಲೆ ಗೊಬ್ಬರ ಬೀಜಗಳು, ಮೋಹಕ ಬಲೆಗಳ ಬಳಕೆಗೆ ಶೇ 50ರ ಸಹಾಯಧನವನ್ನು ರೈತರಿಗೆ ನೀಡಲಾಗುತ್ತಿದೆ.<br><br>ಕೇಂದ್ರ ಸರ್ಕಾರದಿಂದ ನಿಗದಿಪಡಿಸುವ ಕಿರು ಚೀಲಗಳನ್ನು ಉಚಿತವಾಗಿ ರೈತರಿಗೆ ವಿತರಿಸಿ ತೊಗರಿ ಬೆಳೆಯ ಉತ್ಪಾದನೆಗೆ ಹೆಚ್ಚಿನ ಒತ್ತು ನೀಡುವಂತೆ ಪ್ರೋತ್ಸಾಹಿಸಲಾಗುತ್ತಿದೆ.<br><br>ತೊಗರಿ ಬೆಳೆಯ ವಿಸ್ತೀರ್ಣ ಹೆಚ್ಚಿಸಲು ಇತರೆ ಬೆಳೆಗಳಲ್ಲಿ ತೊಗರಿಯನ್ನು ಅಂತರ ಬೆಳೆಯಾಗಿ ಬೆಳೆಯಲು ರೈತರಿಗೆ ಹೆಚ್ಚಿನ ಪ್ರಚಾರ, ತರಬೇತಿ ಹಾಗೂ ಕ್ಷೇತ್ರೋತ್ಸವಗಳ ಮುಖಾಂತರ ವ್ಯಾಪಕ ಪ್ರಚಾರ ನೀಡುವ ಮೂಲಕ ರಾಜ್ಯದಲ್ಲಿ ತೊಗರಿ ಬೆಳೆಯ ಉತ್ಪಾದನೆಯನ್ನು ಹೆಚ್ಚಿಸಲು ಮತ್ತು ತೊಗರಿ ಬೆಳೆ ಆಮದನ್ನು ಕಡಿಮೆಗೊಳಿಸಲು ಕ್ರಮ ವಹಿಸಲಾಗುತ್ತಿದೆ. |
| ಈ) | ತೊಗರಿ ಬೇಳೆಗೆ ಸಂಬಂಧಿಸಿದಂತೆ ತೊಗರಿ ಬೆಳೆಯುವ ಭಾಗದಿಂದ ಸರ್ಕಾರಕ್ಕೆ ಸಲ್ಲಿಸಿರುವ ಬೇಡಿಕೆಗಳು ಯಾವುವು; ಈ ಬೇಡಿಕೆಗಳಲ್ಲಿ ಸರ್ಕಾರ ಇದುವರೆಗೂ ಎಷ್ಟು ಭರವಸೆಗಳನ್ನು ಈಡೇರಿಸಿದೆ; | ಕರ್ನಾಟಕ ರಾಜ್ಯ ದ್ವಿದಳ ಧಾನ್ಯ ಅಭಿವೃದ್ಧಿ ಮಂಡಳಿ ನಿಯಮಿತ, ಕಲಬುರಗಿ ಸಂಸ್ಥೆಯಿಂದ ಭೀಮಾ ಪಲ್ಸ್ಸ್ ಬ್ರಾಂಡ್ ನಡಿಯಲ್ಲಿ ಗುಲಬರ್ಗಾ ಜಿ.ಐ ತೊಗರಿ ಬೇಳೆಯ ಉತ್ತೇಜನ ಸಲುವಾಗಿ ಅನುದಾನ ಕೋರಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿತ್ತು. ಅದರನ್ವಯ 2022-23ನೇ ಸಾಲಿನ ಆಯವ್ಯಯದಲ್ಲಿ ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಯಲ್ಲಿ ಬೆಳೆಯುವ ವಿಶಿಷ್ಟವಾದ ಭೌಗೋಳಿಕ ಸೂಚ್ಯಂಕ ಹೊಂದಿದ ತೊಗರಿ ಬೇಳೆಯನ್ನು "ಭೀಮಾ ಪಲ್ಸ್" ಬ್ರಾಂಡ್ ನಡಿ ಮಾರಾಟ ಮಾಡುವ ಹೊಸ ಯೋಜನೆಗೆ ಅನುಮೋದನೆ ನೀಡಿ ರೂ.2.00ಕೋಟಿ ಅನುದಾನವನ್ನು ನೀಡಲಾಗಿರುತ್ತದೆ. |
| ಉ) | ಕಲಬುರಗಿ, ಬೀದರ್ ಜಿಲ್ಲೆಗಳಲ್ಲಿ ಕಳೆದ ವರ್ಷ ಸಿಡಿ ರೋಗದಿಂದ ಎಷ್ಟು ಪ್ರಮಾಣದ ಬೆಳೆ ನಾಶವಾಗಿದೆ; ಸಿಡಿ | ಕಲಬುರಗಿ, ಬೀದರ್ ಜಿಲ್ಲೆಗಳಲ್ಲಿ ಕಳೆದ ವರ್ಷ ಸಿಡಿ ರೋಗದಿಂದ ತೊಗರಿ ಬೆಳೆ ಹಾನಿಯಾಗಿರುವುದು ಸರ್ಕಾರದ ಗಮನಕ್ಕೆ |

| | | |
|---|---|---|
| | ರೋಗವನ್ನು ತಡೆಗಟ್ಟಲು ಸರ್ಕಾರ ಕೈಗೊಂಡ ಕ್ರಮಗಳೇನು? | ಬಂದಿರುವುದಿಲ್ಲ. ಆದಾಗ್ಯೂ 2022-23ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ಬಿತ್ತನೆಯಾದ ತೊಗರಿ ಬೆಳೆಯು ಕಲಬುರಗಿ ಜಿಲ್ಲೆಯಲ್ಲಿ 181870.0 ಹೆಕ್ಟೇರ್ ಪ್ರದೇಶದಲ್ಲಿ ಹಾಗೂ ಬೀದರ್ ಜಿಲ್ಲೆಯಲ್ಲಿ 13280.0 ಹೆಕ್ಟೇರ್ ಪ್ರದೇಶದಲ್ಲಿ ನೆಟೆ ರೋಗದಿಂದ ಹಾನಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.<br><br>2022-23ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ಬಿತ್ತನೆಯಾದ ನೆಟೆ ರೋಗದಿಂದ ತೊಗರಿ ಬೆಳೆ ಹಾನಿಗೊಳಗಾದ ರೈತರ ನೆರವಿಗೆ ಧಾವಿಸಿ "ವಿಶೇಷ ಪ್ರಕರಣ"ವೆಂದು ರಾಜ್ಯ ಸರ್ಕಾರ ತೀರ್ಮಾನಿಸಿ, ಬಾಧಿತ ರೈತರ ಪ್ರತಿ ಹೆಕ್ಟೇರ್‌ಗೆ ರೂ. 10,000/- ದಂತೆ ಗರಿಷ್ಟ 2 ಹೆಕ್ಟೇರ್‌ಗೆ ಸೀಮಿತಗೊಳಿಸಿ ಎನ್.ಡಿ.ಆರ್.ಎಫ್ / ಎಸ್.ಡಿ.ಆರ್.ಎಫ್. ಮಾರ್ಗಸೂಚಿಯಂತೆ ಕ್ರಮವಾಗಿ ಕಲಬುರಗಿ ಮತ್ತು ಬೀದರ್ ಜಿಲ್ಲೆಯ 193527 ಹಾಗೂ 44102 ಅರ್ಹ ರೈತ ಫಲಾನುಭವಿಗಳಿಗೆ ರೂ. 18187.0 ಮತ್ತು 1328.0 ಲಕ್ಷಗಳನ್ನು ಬ್ಯಾಂಕ್ ಖಾತೆಗಳಿಗೆ ಕೇಂದ್ರೀಕೃತ ನೇರ ನಗದು ವರ್ಗಾವಣೆಯನ್ನು ಮಾಡಲಾಗಿರುತ್ತದೆ.<br><br>ನೆಟೆ ರೋಗ ನಿಯಂತ್ರಣಕ್ಕೆ ಕೆಳಕಂಡಂತೆ ಕ್ರಮಗಳನ್ನು ವಹಿಸಲಾಗುತ್ತಿದೆ.<br><br>➢ ಕಡಿಮೆ ಫಲವತ್ತತೆಯ ಹಾಗೂ ಕಡಿಮೆ ತೇವಾಂಶದ ಮಣ್ಣಿನಲ್ಲಿ ಈ ರೋಗದ ತೀವ್ರತೆ ಹೆಚ್ಚಾಗಿ ಕಂಡುಬರುವುದರಿಂದ ಮಣ್ಣಿನ ಫಲವತ್ತತೆಯನ್ನು ಹೆಚ್ಚಿಸಲು ರೈತರಲ್ಲಿ ಅರಿವು ಮೂಡಿಸಲಾಗುತ್ತಿದೆ.<br><br>➢ ಬೆಳೆಯ ರೋಗಕಾರಕಗಳು ಮಣ್ಣಿನಲ್ಲಿಯೇ ಉಳಿಯುವುದರಿಂದ ಹಾಗೂ ಬೇಸಿಗೆಯಲ್ಲಿ ಮಾಗಿ ಉಳುಮೆಯನ್ನು ಕೈಗೊಳ್ಳಲು ಹಾಗೂ ಜೈವಿಕ ಪೀಡೆನಾಶಕಗಳಾದ ಟ್ರೈಕೋಡರ್ಮಾ ಅಥವಾ ಸ್ಯೂಡೋಮೋನಾಸ್ ಗಳನ್ನು ಮಣ್ಣಿಗೆ ಸಾವಯವ ಗೊಬ್ಬರಗಳ ಮೂಲಕ ಸೇರಿಸಲು ರೈತರಲ್ಲಿ ಅರಿವು ಮೂಡಿಸಲಾಗುತ್ತಿದೆ. |

| | | |
|---|---|---|
| | | ➢ ರೋಗ ನಿರೋಧಕ ತಳಿಗಳನ್ನು ಬೆಳೆಯಲು ಉತ್ತೇಜಿಸಲಾಗುತ್ತಿದೆ.<br>➢ ಜಿಲ್ಲಾ ಪೀಡೆ ಸರ್ವೇಕ್ಷಣಾ ಹಾಗೂ ಸಲಹಾ ಘಟಕವು ಕೃಷಿ ವಿಶ್ವವಿದ್ಯಾಲಯಗಳ ವಿಜ್ಞಾನಿಗಳೊಂದಿಗೆ ಪೀಡೆ ಸರ್ವೇಕ್ಷಣೆಯನ್ನು ಕೈಗೊಂಡು ರೋಗ ಬಾಧೆ ಕಂಡುಬಂದಲ್ಲಿ ಕೈಗೊಳ್ಳಬೇಕಾದ ನಿರ್ವಹಣಾ ಕ್ರಮಗಳ ಬಗ್ಗೆ ಮಾಹಿತಿಯನ್ನು ರೈತರಿಗೆ ಒದಗಿಸಲಾಗುತ್ತಿದೆ.<br>➢ ರೋಗ ನಿರ್ವಹಣಾ ಕ್ರಮಗಳ ಬಗ್ಗೆ ಮಾಹಿತಿಯನ್ನು ಇಲಾಖೆಯ ಸಂಚಾರಿ ಸಸ್ಯ ಆರೋಗ್ಯ ಚಿಕಿತ್ಸಾಲಗಳ ಮೂಲಕ, ಸಮೂಹ ಮಾಧ್ಯಮಗಳ ಮೂಲಕ, ವಾಟ್ಸ್-ಆಪ್ ಗ್ರೂಪ್ ಗಳ ಮೂಲಕ ರೈತರಿಗೆ ಆಗಿಂದಾಗ್ಗೆ ನೀಡಲಾಗುತ್ತಿದೆ.<br><br>ಅನುದಾನದ ಲಭ್ಯತೆಯ ಅನುಗುಣವಾಗಿ ಜೈವಿಕ ಹಾಗೂ ರಾಸಾಯನಿಕ ಪೀಡೆನಾಶಕಗಳನ್ನು ರೈತ ಸಂಪರ್ಕ ಕೇಂದ್ರಗಳ ಮೂಲಕ ದಾಸ್ತಾನೀಕರಿಸಿ ಸಹಾಯಧನದಡಿ ರೈತರಿಗೆ ವಿತರಿಸಲಾಗುತ್ತದೆ. |

ಸಂಖ್ಯೆ: AGRI/150/ACT/2024

**(ಎನ್. ಚಲುವರಾಯಸ್ವಾಮಿ)**
ಕೃಷಿ ಸಚಿವರು